ದಿನಾಂಕಃ 03-03-2020 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ- ಪ್ರತಿವಾದಿ ಪರ ಶ್ರೀ ಕೆ ಸಿ ಪಿ ವಕೀಲರಿಂದ

ದಾವಾ ಆಸ್ತಿಯಲ್ಲಿ ಪ್ರಾರ್ಥನಾ ಮಂದಿರ ಇದ್ದ ಬಗ್ಗೆ ಹಾಗೂ ಬಾವಿ ಇದ್ದ ಬಗ್ಗೆ ನಾನು ಯಾವುದೇ ಛಾಯಾಚಿತ್ರವನ್ನು ಹಾಜರುಪಡಿಸಿರುವುದಿಲ್ಲ ದಾವಾ ಆಸ್ತಿಯಲ್ಲಿ ಯಾವುದೇ ಪ್ರಾರ್ಥನಾ ಮಂದಿರ ಹಾಗೂ ಬಾವಿ ಇರದೆ ಇರುವುದರಿಂದ ಆ ಕಾರಣಕ್ಕಾಗಿ ಅವುಗಳ ಇದ್ದ ಬಗ್ಗೆ ಛಾಯಾಚಿತ್ರ ವನ್ನು ತೆಗೆದಿರುವುದಿಲ್ಲ ಹಾಗೂ ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ಈ ದಾವೆ ದಾಖಲು ಮಾಡುವ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ 2013 ರ ಸಾಲಿನ ಪಹಣಿ ಪತ್ರಿಕೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವೆವು. ಒಟ್ಟು ಎಷ್ಟು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುವೆನು ಎಂಬುದರ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ.

ಗಿರಿಯಪ್ಪಗೌಡ ಮೃತಪಟ್ಟ ನಂತರ ಆತನ ಆಸ್ತಿಗೆ ವಾರಸುದಾರರು ಅಂತಾ ಮಲ್ಲಿಕಾರ್ಜುನಗೌಡ, ಆತನ ಸಹೋದರನ ಮಕ್ಕಳು ಹಾಗೂ ಸಹೋದರಿ ಕಾಶವ್ವ ಇವರ ಹೆಸರುಗಳು ದಾಖಲು ಆಗಿರುವವು ಅಂದರೆ ಸಾಕ್ಷಿ ಸರಿ ಎಂದು ಉತ್ತರಿಸಿರುವರು. ಅವರು ಈ ಆಸ್ತಿಗಳಲ್ಲಿ ವಾಟ್ನಿ ಮಾಡಿಕೊಂಡಿರುವರು ಅಂದರೆ ಸರಿ. ನಂತರ ಕಾಶವ್ವ ಈ ಆಸ್ತಿಗಳ ಕುರಿತು ದಾವೆ ದಾಖಲು ಮಾಡಿರುವರು ಅಂದರೆ ಸರಿ. ದಿಃ 06.06.1992 ರಂದು ವಾಟ್ನಿ ಪ್ರಕಾರ ಅವರ ಹೆಸರುಗಳು ದಾಖಲಾಗಿರುವವು ಅಂದರೆ ಸರಿ. ನಂತರ ಕಾಶವ್ವ ಹಾವೇರಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ನಂ. 50/1992 ರ ದಾವೆಯನ್ನು ದಾಖಲು ಮಾಡಿರುವರು ಅಂದರೆ ಸರಿ. ಆ ದಾವೆಯು ರಾಜೀಯಲ್ಲಿ ಕೊನೆಗೊಂಡಿದ್ದು ಆ ರಾಜೀ ಪ್ರಕಾರ ಹಿಸ್ಸೆಗಳನ್ನು ಮಾಡಿಕೊಂಡಿರುವರು ಅಂದರೆ ಸರಿ. ಆ ರಾಜೀ ಡಿಕ್ರಿಯ ಪ್ರಕಾರ ಬಂದಿರತಕ್ಕಂತಹ ರಿ ಸ ನಂ 6/2 ಎ ದ ಜಮೀನಿನಲ್ಲಿನ 1 ಎಕರೆ 13

ಗುಂಟೆ ಜಮೀನನ್ನು 2001 ನೇ ಸಾಲಿನಲ್ಲಿ ಪ್ರತಿವಾದಿ 1 ರವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿರುವರು ಅಂದರೆ ಸರಿ. ಅದೇ ರೀತಿ ಪ್ರತಿವಾದಿ ನಂ. 12 ದೇವಪ್ಪ, ಪ್ರತಿವಾದಿ 13 ಮೌಲಾಸಾಬ, ಪ್ರತಿವಾದಿ 14 ಮೆಹಬೂಬಸಾಬ ಇವರು ಖರೀದಿ ಮಾಡಿರುವರು ಅಂದರೆ ಆ ಖರೀದಿ ಪತ್ರದ ದಾಖಲೆಯ ಪ್ರಕಾರ ಖರೀದಿ ಮಾಡಿರುವರು ಎಂದು ಸಾಕ್ಷಿ ಉತ್ತರಿಸಿರುವರು. ಪ್ರತಿವಾದಿ 1, 12 ರಿಂದ 14 ರವರು ಅವರು ಖರೀದಿ ಮಾಡಿರುವ ದಿನಾಂಕದಿಂದಲೂ ಆ ಜಮೀನುಗಳ ಕಬ್ಜೆಯನ್ನು ಇವತ್ತಿನವರೆಗೂ ಇರುವರು ಅಂದರೆ ಸರಿ.

ಈ ಮೃತ್ಯುಪತ್ರದ ಬಗ್ಗೆ ದಿಃ 11.01.2011 ರಂದು ಗೊತ್ತಾದ ನಂತರ ಪ್ರತಿವಾದಿ 1, 12 ರಿಂದ 14 ರವರಿಗೆ ತಾವು ಖರೀದಿ ಮಾಡಿರುವ ಆಸ್ತಿಯನ್ನು ಬಿಟ್ಟುಕೊಡುವಂತೆ ವೈಯಕ್ತಿಕವಾಗಿ ನಾವು ಕೇಳಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಎಲ್ಲಾ ದಾಖಲಾತಿಗಳನ್ನು ನಾನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 1, 12 ರಿಂದ 14 ರವರಿಗೆ ಮಾರಾಟ ಮಾಡಿರುವ ದಾವಾ ಜಮೀನುಗಳ ಚಕ್ಕಬಂದಿ ನನಗೆ ಹೇಳಲು ಆಗುವುದಿಲ್ಲ. ಆ ರಾಜೀ ಡಿಕ್ರಿಯು ಬಂಧನಕಾರಿ ಆಗಿರುವುದಿಲ್ಲ ಅಂದರೆ ಸರಿಯಲ್ಲ. ವಾದಪತ್ರದಲ್ಲಿ ಹೇಳಿರತಕ್ಕಂತಹ ಮೃತ್ಯುಪತ್ರದ ಆಧಾರದ ಮೇರೆಗೆ ದಾವಾ ಆಸ್ತಿಗೆ ನಾವು ಮಾಲೀಕರಾಗಿದ್ದೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಗಿರಿಯಪ್ಪಗೌಡ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಕಾಲಕ್ಕೂ ವಾದಿಯ ಮಠದ ಹೆಸರಿನಲ್ಲಿ ಯಾವುದೇ ಮೃತ್ಯುಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ.

ಪ್ರತಿವಾದಿ 1 ಒಳ್ಳೇಯ ವ್ಯಕ್ತಿ ಆಗಿರುವರು ಅಂದರೆ ಸರಿ. ವಾದಿ ಮಠ ಹಾಗೂ ಮೃತ್ಯುಪತ್ರದ ಮೇಲೆ ಸಾಕ್ಷಿದಾರರು ಅಂತಾ ಸಹಿ ಮಾಡಿರುವ ವ್ಯಕ್ತಿಗಳೊಂದಿಗೆ ಕೂಡಿಕೊಂಡು ಈ ಮೃತ್ಯುಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ ಈ ಸೃಷ್ಟಿ ಮಾಡಿಕೊಂಡಿರತಕ್ಕತಂಹ ಮೃತ್ಯುಪತ್ರದ ಆಧಾರದ ಮೇರೆಗೆ ಈ ಸುಳ್ಳು ದಾವೆಯನ್ನು ದಾಖಲು ಮಾಡಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ರೂ. 8 ಲಕ್ಷ ರೂಪಾಯಿಯ ಮೌಲ್ಯದ್ದು ಆಗಿರಲಿಲ್ಲ ಅಂತಾ ಸೂಚಿಸುವುದು ಸರಿಯಲ್ಲ.

ಸುಳ್ಳು ದಾಖಲಾತಿಯ ಆಧಾರದ ಮೇರೆಗೆ ಈ ಸುಳ್ಳು ದಾವೆ ದಾಖಲು ಮಾಡಿರುವುದರಿಂದ ವಾದಪತ್ರದಲ್ಲಿ ಕೋರಿರುವಂತ ಯಾವುದೇ ಮಾಗಣಿಯನ್ನು ಪಡೆದುಕೊಳ್ಳಲು ವಾದಿಯ ಮಠ ಅರ್ಹರಾಗಿರುವುದಿಲ್ಲ ಅಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರಾರ್ಥನಾ ಮಂದಿರ ಇದ್ದ ಬಗ್ಗೆ ಇರುವುದಾಗಿ ಎಂದು ವಾದಪತ್ರದಲ್ಲಿ ಹೇಳಿರುವ ಬಗ್ಗೆ ಅದಕ್ಕೆ ಪ್ರತ್ಯೇಕವಾದ ಮಾರುಕಟ್ಟೆ ಮೌಲ್ಯ ನಿಗದಿಪಡಿಸಿರುವುದಿಲ್ಲ ಅಂದರೆ ಸರಿ. ಈ ದಾವೆ ದಾಖಲು ಮಾಡುವ ಸಮಯದಲ್ಲಿ ದಾವಾ ಆಸ್ತಿಯಲ್ನಿ ಪ್ರಾರ್ಥನಾ ಮಂದಿರಕ್ಕೆ ಸಂಬಂಧಪಟ್ಟಂತೆ ಮಾರುಕಟ್ಟೆ ಬೆಲೆಯನ್ನು ನಿಗದಿಪಡಿಸಲು ಯಾವುದೇ ತೊಂದರೆ ಇರಲಿಲ್ಲ ಅಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.

ಅಸಲು ದಾವಾ  ನಂ. 174/2017

ಪಿಡಬ್ಲು 1